ಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನರಗಳಲ್ಲಿ ಕೊಡುವ ಚುಚ್ಚುಮದ್ದು ದ್ರವಗಳನ್ನು ಮತ್ತು ಇನ್ನಿತರ ಕೆಳವು ಬಗೆಯ ಔಷಧಿ ದ್ರವ್ಯಗಳನ್ನು ತಯಾರಿಸಲು ನಮ್ಮ ಸರಕಾರದವರು ಆಸ್ಪತ್ರೆಗಳಲ್ಲಿಯೇ ಅಲ್ಲಲ್ಲಿ ಕೆಲವು ಘಟಕಗಳನ್ನು ಸ್ಥಾಪಿಸಿದ್ದಾರೆ. ಇದರಿಂದ ಸಾಕಷ್ಟು ಮಿತ ವ್ಯಯವನ್ನು ಸಾಧಿಸಿದಂತಾಗಿದೆ. ಅಷ್ಟೇ ಅಲ್ಲದೆ, ಆಸ್ಪತ್ರೆಗಳಲ್ಲಿ ಉಪಯೋಗಿಸಲು ಹೆಚ್ಚು ಔಷಧಿಗಳನ್ನು ಕೊಂಡುಕೊಳ್ಳಲು ಇದರಿಂದ ಅನುಕೂಲವಾಗಿದೆ.

ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗಿದೆ; 1971ರಲ್ಲಿ ಪ್ರತಿ ಸಾವಿರಕ್ಕೆ 31.7ರಷ್ಟು ಇದ್ದ ಜನನ ಸಂಖ್ಯೆಯನ್ನು 1975ರಲ್ಲಿ ಪ್ರತಿ ಸಾವಿರಕ್ಕೆ 28.9ಕ್ಕೆ ಇಳಿಸಲಾಗಿದೆ.

ಆರು ಆಯುರ್ವೇದ ಔಷಧಾಲಯಗಳನ್ನೂ ಒಂದು ಯುನಾನಿ ಔಷಧಾಲಯವನ್ನೂ ಮತ್ತು ಒಂದು ಹೋಮಿಯೋಪಥಿ ಔಷಧಾಲಯವನ್ನು, ಅಲ್ಲದೆ 25 ಹಾಸಿಗೆಗಳಿರುವ ಒಂದು ಹೋಮಿಯೋಪಥಿ ಆಸ್ಪತ್ರೆಯನ್ನೂ ಪ್ರಾರಂಭಿಸಲಾಗಿದೆ.

29.5ಕೋಟಿ ರೂಪಾಯಿಗಳ ಅಂದಾಜು ವೆಚ್ಚದ 24 ನೀರು ಸರಬರಾಜು ಯೋಜನೆಗಳನ್ನು ಮತ್ತು 10.6 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ 20 ಒಳಚರಂಡಿ ಯೋಜನೆಗಳನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೈಕೊಂಡಿದೆ.

ಮುಕ್ತಾಯದ ಹಂತದಲ್ಲಿದ್ದ 540 ಕೊಳವೆ ನೀರು ಸರಬರಾಜು ಯೋಜನೆಗಳ ಪೈಕಿ 34 ಯೋಜನೆಗಳನ್ನು ಕಳೆದ ವರ್ಷ ಪೂರ್ಣಗೊಳಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ರಮದ ಅಂಗವಾಗಿ 1,047 ತೆರೆದ ಬಾವಿಗಳನ್ನು ಪೂರ್ತಿಗೊಳಿಸಲಾಯಿತು ಮತ್ತು 1,234 ಕೊರೆ ಬಾವಿಗಳನ್ನು ಕಳೆದ ವರ್ಷ ನಿರ್ಮಿಸಲಾಗಿದೆ.

ನ್ಯಾಯಾಲಯಗಳಲ್ಲಿ ಸದಾ ಉಪಯೋಗಿಸಲಾಗುವ ಅಧಿನಿಯಮಗಳ ಕನ್ನಡ ಭಾಷಾಂತರವನ್ನು ತಯಾರಿಸುವ ಕಾರ್ಯವು ಮುಂದುವರೆಯುತ್ತಿದೆ. ಸುಮಾರು 10,000 ಶಬ್ದಗಳಿಂದ ಕೂಡಿದ ಮತ್ತು ಸರ್ಕಾರಿ ಕಚೇರಿಗಳಿಗೆ ಹಾಗೂ ನ್ಯಾಯಾಲಯಗಳಿಗೆ ಅತ್ಯುಪಯುಕ್ತವೆನಿಸುವ ಒಂದು ಕಾನೂನು ಪದಕೋಶವನ್ನು ಈಗಾಗಲೇ ಪ್ರಕಟಿಸಲಾಗಿದೆ.

1975ರ ಜೂನ್ ಕೊನೆಯಲ್ಲಿ ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಪರಿಣಾಮವಾಗಿ ಜಾತಿ ಭಾವನೆ ಕೆರಳಿಸುವ ಮತ್ತು ಸಮಾಜ ವಿರೋಧಿ ವ್ಯಕ್ತಿಗಳನ್ನು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿಡಲಾಗಿದೆ. ದೊಡ್ಡ ಪ್ರಮಾಣದ ಕೋಮುವಾರು ಘಟನೆಗಳಾಗಲಿ ಅಥವಾ ಯಾವುದೇ ಬಗೆಯ ವಿದ್ಯಾರ್ಥಿ ಗಲಭೆಗಳಾಗಲಿ ಅಥವಾ ಹಿಂಸಾತ್ಮಕ ಚಟುವಟಿಕೆಗಳಾಗಲಿ ನಡೆದಿಲ್ಲ. ಆಹಾರ ಧಾನ್ಯಗಳ ಕಳ್ಳಸಾಗಣೆ, ಅಕ್ರಮ ದಾಸ್ತಾನು ಮತ್ತು ಅಕ್ರಮ ಲಾಭ ಸಂಪಾದನೆ ಇವುಗಳನ್ನು ತಡೆಯಲು ತೀವ್ರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ವರ್ಷದಲ್ಲಿ ಸುಮಾರು 1.40 ಕೋಟಿ ರೂಪಾಯಿ ಬೆಲೆ ಬಾಳುವ ಆಹಾರ ಧಾನ್ಯಗಳನ್ನೂ ಅಗತ್ಯ ಸರಕುಗಳನ್ನೂ ವಶಪಡಿಸಿಕೊಳ್ಳಲಾಗಿದೆ.

ರಾಷ್ಟ್ರೀಯ ಶಿಸ್ತುಪಾಲನೆ ಮತ್ತು ಆರ್ಥಿಕ ಅಭಿವೃದ್ಧಿಯ ದಿಶೆಯಲ್ಲಿ ಭಾರತ ಸರಕಾರದವರು ಮತ್ತು ರಾಜ್ಯ ಸರ್ಕಾರದವರು ಕೈಗೊಂಡ ಕ್ರಮಗಳನ್ನು ಬಹು ಜನರು ಸ್ವಾಗತಿಸಿದ್ದಾರೆಂಬುದು ವ್ಯಕ್ತವಾಗಿದೆ ಮತ್ತು ಅಂಥ ಕ್ರಮಗಳನ್ನು ರಾಷ್ಟ್ರೀಯ ಮುನ್ನಡೆಗೆ ಮತ್ತು ಪ್ರಗತಿಗೆ ಅನುಕೂಲವಾಗಿದೆಯೆಂದು ಜನರು ಭಾವಿಸಿದ್ದಾರೆ. ಅಲ್ಲದೆ, ಈ ಕ್ರಮಗಳನ್ನು ಇನ್ನೂ ಹೆಚ್ಚು ಸಮರ್ಪಣಾ ಭಾವದಿಂದ ಮತ್ತು ದೃಢ ನಿರ್ಧಾರದಿಂದ ಜಾರಿಗೊಳಿಸಬೇಕೆಂದು ಜನ ಬಯಸುತ್ತಾರೆ. ಈ ದಿಶೆಯಲ್ಲಿ ನಮ್ಮ ಸರಕಾರವು ಎಲ್ಲ ಉತ್ಸಾಹಪೂರ್ಣ ಪ್ರಯತ್ನಗಳನ್ನೂ ಮಾಡುವುದು.

1976-77ರ ವಾರ್ಷಿಕ ಯೋಜನಾ ಕಾರ್ಯಕ್ರಮವನ್ನು ಆಯವ್ಯಯ ಅಂದಾಜುಗಳೊಂದಿಗೆ ತಮ್ಮ ಮುಂದೆ ಇಡಲಾಗುವುದು. ಹಿಂದಿನ ಅಧಿವೇಶನದಲ್ಲಿ ಮಂಡಿಸಲಾದ, ಆದರೆ ಪರಿಶೀಲನೆಯ ಉಳಿದಿರುವ ಕೆಲವು ವಿಧೇಯಕಗಳನ್ನು ಮತ್ತು ಹೊರಡಿಸಲಾದ ಆಧ್ಯಾದೇಶಗಳಿಗೆ ಬದಲಾಗಿ ಕೆಲವು ವಿಧೇಯಕಗಳನ್ನು ಪರಿಶೀಲನೆಗಾಗಿ ತಮ್ಮ ಮುಂದೆ ಇಡಲಾಗುವುದು. ಜನರು ತಮ್ಮಿಂದ ನಿರೀಕ್ಷಿಸುವಂತೆ ಸ್ಪಷ್ಟವಾದ, ದಿಟ್ಟವಾದ ಮತ್ತು ಅಚಲವಾದ ಮಾರ್ಗದರ್ಶನವನ್ನು ತಾವು ನೀಡುವಿರೆಂಬ ಭರವಸೆ ನನಗಿದೆ. ತಾವು ತಮ್ಮ ಕಾರ್ಯಕ್ರಮವನ್ನು ಪ್ರಾರಂಭಿಸಬೇಕೆಂದು ಆಹ್ವಾನಿಸಿ ತಮಗೆ ಎಲ್ಲ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

ಜೈ ಹಿಂದ್